ದಿನಾಂಕಃ 16.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃವಾದಿ ಪರ ವಕೀಲರಿಂದಃ</u>**

ನಾನು 3ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನಾನು ನಮ್ಮ ತಾಯಿ ಮತ್ತು ಸಹೋದರಿಯರ ವಿರುದ್ದ ದಾವಾ ಸ್ವತ್ತುಗಳಿಗೆ ಸಂಬಂದಿಸಿದಂತೆ ಈ ದಾವೆಯನ್ನು ಊಡಿರುತ್ತೇವೆ. ದಾವಾ ಸ್ವತ್ತಿನ ಐಟಂ ನಂ 1 ರ ವಿಸ್ತೀರ್ಣ 25 ಗುಂಟೆ. ಚೆಕ್ಕು ಬಂದಿ ನನಗೆ ನೆನಪಿಲ್ಲ. ದಾವಾ ಸ್ವತ್ತಿನ ಐಟಂ ನಂ 2 ಮತ್ತು 3 ರ ವಿಸೀರ್ಣ ಒಟ್ಟು 2 ಎಕರೆ 11 ಗುಂಟೆ ಮೇಲುಕುಂಟೆ ಗ್ರಾಮಕ್ಕೆ ಸಂಬಂಧಿಸಿರುತ್ತದೆ. ದಾವಾ ಸ್ವತ್ತುಗಳನ್ನು ನಾನು ಮತ್ತು ನನ್ನ ಸಹೋದರ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಮೇಲ್ಕುಂಟೆ ಗ್ರಾಮದಲ್ಲಿ ಒಂದು ನಿವೇಶನ ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ನಿವೇಶನವನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ಅಣ್ಣ ಜಂಟಿ ಕುಂಟುಂಬದ ಆದಾಯದಿಂದ ಮನೆಗಳನ್ನು ಕಟ್ಟಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಐಟಂ ನಂ 3 ರಲ್ಲಿ ಮನೆಗಳನ್ನು ನಿರ್ಮಿಸಿರುತ್ತೇವೆ ಸದರಿ ಮನೆಗಳ ದಾಖಲೆಗಳು ನಮ್ಮ ತಾಯಿಯ ಹೆಸರಿನಲ್ಲಿರುತ್ತವೆ. ಸದರಿ ದಾಖಲೆಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ ಎಂದರೆ ಸರಿ. ನಾನು ಮತ್ತು 5ನೇ ಪ್ರತಿವಾದಿ ಜಮೀನಿನ ವಿಚಾರವಾಗಿ ಜಗಳ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ಪಟ್ಟನಾಯಕನಹಳ್ಳಿ ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ಪಟ್ಟನಾಯಕನಹಳ್ಳಿ ಪೋಲೀಸ್ ಠಾಣೆಗೆ ನನ್ನ ಮತ್ತು 5ನೇ ಪ್ರತಿವಾದಿಗಳ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನಾವು ವಿಭಾಗ ಮಾಡಿಕೊಳ್ಳಲು ತೀರ್ಮಾನ ಮಾಡಿರುತ್ತೇವೆ ಎಂದರೆ ಸರಿಯಲ್ಲ.

5ನೇ ಪ್ರತಿವಾದಿ 2020ನೇ ನಮ್ಮ ವಿಭಾಗ ಪತ್ರದೊಂದಿಗೆ ನಡೆದುಕೊಳ್ಳಲು ಸಿದ್ದರಿದ್ದೇವೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಂತೆ ನಮ್ಮ ತಂದೆಯ ಹೆಸರಿಗೆ ಇರುವ ಜಮೀನು 5ನೇ ಪ್ರತಿವಾದಿಗೆ ಮತ್ತು ಉಳಿಕೆ ಜಮೀನನ್ನು ವಾದಿಗೆ ಹೆಸರಿಗೆ ಎಂದು ಪಂಚಾಯಿತಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ನಮ್ಮ ತಾಯಿಯ ಜೀವನಾಂಶಕ್ಕೆ ಪ್ರತಿ ತಿಂಗಳು ತಲಾ ಒಂದು ಸಾವಿರ ಹಣ ನೀಡಲು ಒಪ್ಪಿ ದೇವೆ ಎಂದರೆ

ಸರಿಯಲ್ಲ. ನನ್ನ ಜಮೀನಿನಲ್ಲಿರುವ ಹುಣಸೆ ಮರದಿಂದ ಬರುವ ಆದಾಯವನ್ನು ನಮ್ಮ ತಾಯಿಯವರು ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. 2020 ರ ವಿಭಾಗ ಪತ್ರದಂತೆ ನಾವು ಹಂಚಿಕೆ ಮಾಡಿಕೊಂಡು ಯಾವುದೇ ಗಲಾಟೆ ಮಾಡಿಕೊಳ್ಳುವುದಿಲ್ಲ ಎಂದು ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು 5ನೇ ಪ್ರತಿವಾದಿಯ ಮಗಳನ್ನು ಮದುವೆಯಾಗಿದ್ದೇನೆ. ನಾನು 1, 3 ಮತ್ತು 6ನೇ ಪ್ರತಿವಾದಿಗಳ ಜೊತೆ ಅನ್ಯೂನ್ಯವಾಗಿದ್ದೇವೆ ಎಂದರೆ ಸರಿ. ನನ್ನ ತಾಯಿಯನ್ನು ನಾನು ನೋಡಿಕೊಳ್ಳುತ್ತಿದ್ದೇನೆ. ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಊಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕ ಸ್ವಾದೀನದಲ್ಲಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.